# ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ರಾಜ್ಯ ಕೇಂದ್ರ ಕಾರ್ಯಾಲಯ, #39, ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು – 560 001

ದೂ:+91-80-2226 0017;+91-80-2226 7470;+91-80-2226 1047 ಮಿಂಚಂಚೆ: info@bsgkarnataka.org ಅಂತರ್ಜಾಲ: www.bsgkarnataka.org


ಸಂಖ್ಯೆ:SHQ/ORG.1/Letter/2026-27-788 ದಿನಾಂಕ:28.07.2026

ಮಾನ್ಯರೆ,

ವಿಷಯ:- **ಸ್ಕೌಟ್ ಸನ್‌ರೈಜ್ ಡೇ (ಸೂರ್ಯೋದಯ ದಿನ) ಮತ್ತು ವಿಶ್ವ ಸ್ಕಾರ್ಫ್ ಡೇ** ದಿನಾಚರಣೆಯನ್ನು ಆಚರಿಸುವ ಬಗ್ಗೆ.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯದ ಎಲ್ಲಾ ಕಬ್ಸ್-ಬುಲ್‌ಬುಲ್ಸ್, ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್, ಶಿಕ್ಷಕರುಗಳು, ಪದಾಧಿಕಾರಿಗಳು ಸಂಪೂರ್ಣ ಸಮವಸ್ತ್ರದಲ್ಲಿ ಅವರವರ ದಳ ಹಂತದಿಂದ ಜಿಲ್ಲಾ ಹಂತದ ವರೆಗೆ ದಿನಾಂಕ: 01.08.2026ರ ಶನಿವಾರಂದು **"ಸ್ಕೌಟ್ ಸನ್‌ರೈಜ್ ಮತ್ತು ವಿಶ್ವ ಸ್ಕಾರ್ಫ್ ಡೇ"** ಆಚರಣೆ ಮಾಡುವುದು. ಇದಕ್ಕೆ ಸಂಬಂಧಪಟ್ಟ ವಿವರಗಳ ಆಕ್ಟಿವಿಟಿ ಪ್ಯಾಕ್ ಪೋಸ್ಟರ್‌ಗಳನ್ನು ಕಳುಹಿಸಲಾಗುವುದು.

- ಆ ದಿನ ಕಬ್ಸ್-ಬುಲ್‌ಬುಲ್ಸ್, ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್, ಸ್ಕೌಟ್ ಪ್ರತಿಜ್ಞೆಯನ್ನು ಮರು ಉಚ್ಚಾರಣೆ ಮಾಡುವುದು.
- ಆ ದಿನ ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್, ಗೈಡ್ಸ್, ರೋವರ್ಸ್, ರೇಂಜರ್ಸ್‌ಗಳು ಹಾಗೂ ಇತರೆ ಪದಾಧಿಕಾರಿಗಳು ಹೊಸಬರನ್ನು ಸ್ಕಾರ್ಫ್ ಹಾಕುವುದರ ಮುಖಾಂತರ ನಮ್ಮ ಸಂಸ್ಥೆಗೆ ಪ್ರತಿ ಜಿಲ್ಲೆಯಿಂದ ಕನಿಷ್ಠ 3000 ಜನರನ್ನು ಸೇರಿಸಿಕೊಳ್ಳಲು ಆಹ್ವಾನಿಸುವುದು ಮತ್ತು ಅವರಿಗೆ ಪ್ರತಿಜ್ಞೆ ಬೋಧಿಸುವುದು
- ವಿವಿಧ ಇಲಾಖೆಗಳ ಉನ್ನತ ಅಧಿಕಾರಿಗಳಿಗೆ ಸ್ಕಾರ್ಫ್ ಹಾಕಿ, ಸಂಸ್ಥೆಯ ಕಾರ್ಯಚಟುವಟಿಕೆಗಳ ಬಗ್ಗೆ ತಿಳಿಸುವುದು.
- ನಗರದ ಪ್ರಮುಖ ವೃತ್ತಗಳಲ್ಲಿ ಮಾರ್ಚ್‌ಫಾಸ್ಟ್ ಮಾಡಿ, ರ‍್ಯಾಲಿಯ ಮೂಲಕ ಜನರಿಗೆ ಸ್ಕಾರ್ಫ್ ಡೇ ಬಗ್ಗೆ ತಿಳುವಳಿಕೆ ಮೂಡಿಸುವುದು.
- ಆ ದಿನದ ಮಕ್ಕಳು ಕನಿಷ್ಠ ಒಂದು ಒಳ್ಳೆಯ ಕೆಲಸ ಮಾಡುವುದು/Good Turn a day
- ಸ್ವಚ್ಛತಾ ಕಾರ್ಯಗಳನ್ನು ಕೈಗೊಳ್ಳುವುದು.
- ಮಕ್ಕಳು ಸ್ಕೌಟಿಂಗ್‌ನಲ್ಲಿ ಸೇರಿದ್ದರಿಂದ, ಅದರಿಂದ ಕಲಿತಿರುವ ಅನುಭವವನ್ನು ಇತರೆ ಮಕ್ಕಳೊಂದಿಗೆ ಹಂಚಿಕೊಂಡು, ಅವರನ್ನು ಸಹ ಸ್ಕೌಟಿಂಗ್‌ಗೆ ಸೇರಲು ಪ್ರೋತ್ಸಾಹಿಸುವುದು.
- ಸ್ಕೌಟಿಂಗ್-ಗೈಡಿಂಗ್ ಅನುಭವವನ್ನು ವಿಡಿಯೋ ಮಾಡಿ, ಸಾಮಾಜಿಕ ಜಾಲತಾಣಗಳಲ್ಲಿ ಅಪ್‌ಲೋಡ್ ಮಾಡುವುದು.
- ತರಬೇತಿ ಪಡೆದಿರುವ ಶಿಕ್ಷಕರುಗಳು, ಹೊಸ ದಳಗಳನ್ನು ಪ್ರಾರಂಭಿಸುವುದು.

ತಾವು ಮತ್ತು ತಮ್ಮ ಜಿಲ್ಲಾ ಪದಾಧಿಕಾರಿಗಳು ಆದ್ಯ ಗಮನ ಹರಿಸಿ, ದಳ ಹಂತದಿಂದ ಜಿಲ್ಲಾ ಹಂತದ ವರೆಗೆ **"ಸ್ಕೌಟ್ ಸನ್‌ರೈಜ್ ಮತ್ತು ವಿಶ್ವ ಸ್ಕಾರ್ಫ್ ಡೇ"** ಆಚರಣೆ ಮಾಡುವಲ್ಲಿ ಸೂಕ್ತ ಕ್ರಮ ವಹಿಸಲು ಕೋರಲಾಗಿದೆ.

ಸ್ಕೌಟ್-ಗೈಡ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

(ಕೆ.ಗಂಗಪ್ಪಗೌಡ)
ರಾಜ್ಯ ಕಾರ್ಯದರ್ಶಿ

ಎಲ್ಲಾ ಜಿಲ್ಲಾ ಕಾರ್ಯದರ್ಶಿಯವರುಗಳಿಗೆ
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್
ಜಿಲ್ಲಾ ಸಂಸ್ಥೆ, ಕರ್ನಾಟಕ

ರಾಜ್ಯ ಮುಖ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ

**ಪ್ರತಿಯನ್ನು ಮಾಹಿತಿಗಾಗಿ:**

1. ಎಲ್ಲಾ ಜಿಲ್ಲಾ ಮುಖ್ಯ ಆಯುಕ್ತರು, ಭಾ.ಸ್ಕೌ&ಗೈ, ಕರ್ನಾಟಕ
2. ಎಲ್ಲಾ ಜಿಲ್ಲಾ ಆಯುಕ್ತರು(ಸ್ಕೌ/ಗೈ), ಭಾ.ಸ್ಕೌ&ಗೈ, ಕರ್ನಾಟಕ
3. ಎಲ್ಲಾ ಸ್ಥಳೀಯ ಸಂಸ್ಥೆಗಳ ಕಾರ್ಯದರ್ಶಿಗಳಿಗೆ, ಭಾ.ಸ್ಕೌ&ಗೈ, ಸಂಬಂಧಪಟ್ಟ ಸ್ಥಳೀಯ ಸಂಸ್ಥೆ
4. ಎಲ್ಲಾ ದಳನಾಯಕರುಗಳಿಗೆ, ಭಾ.ಸ್ಕೌ.&ಗೈ, ಸಂಬಂಧಪಟ್ಟವರಿಗೆ
5. ಎಎಸ್‌ಓಸಿ/ಡಿಓ/ಡಿಓಟಿ/ಎಸ್‌ಜಿವಿ/ಎಸ್‌ಜಿಎಗಳ ಸೂಕ್ತ ಕ್ರಮಕ್ಕಾಗಿ
6. ಕಛೇರಿ ಪ್ರತಿ